ವಿಜಯವಾಣಿ
ಕನ್ನಡಿಗರ ಧ್ವನಿ

**Sunday 23th October 2022, Page No.06**

**RVCE agreement with Indian Navy**

ವಿಜಯವಾಣಿ

# ಭಾರತೀಯ ನೌಕಾಪಡೆ ಜತೆಗೆ ಆರ್‌ವಿಸಿಇ ಒಪ್ಪಂದ



‘ಎಕ್ಸ್‌ಪೋ-2022’ರಲ್ಲಿ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯವು ಭಾರತೀಯ ನೌಕಾಪಡೆ ಜತೆಗೆ ವಿದ್ಯಾರ್ಥಿಗಳು ಪಾಲ್ಗೊಳ್ಳುವಿಕೆ ಸಂಬಂಧ ಮಾಡಿಕೊಂಡ ಒಡಂಬಡಿಕೆ ವಿನಿಮಯ ಸಂದರ್ಭದಲ್ಲಿ ಕಾಲೇಜಿನ ಮುಖ್ಯಸ್ಥರು ಹಾಗೂ ನೌಕಾಪಡೆ ಅಧಿಕಾರಿಗಳು ಉಪಸ್ಥಿತರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಅಹಮದಾಬಾದ್‌ನ ಗಾಂಧಿನಗರದಲ್ಲಿ ನಡೆದ ಡಿಫೆನ್ಸ್ ಎಕ್ಸ್‌ಪೋ-2022 ಕಾರ್ಯಕ್ರಮದಲ್ಲಿ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯವು ಭಾರತೀಯ ನೌಕಾಪಡೆ ಜತೆಗೆ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಕಾರ್ಯಕ್ರಮಕ್ಕೆ (ಸ್ಟೂಡೆಂಟ್ ಎಂಗೇಜ್‌ಮೆಂಟ್ ಪ್ರೋಗ್ರಾಂ) ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಂಡಿದೆ.

» **ಒಡಂಬಡಿಕೆ ಮಾಡಿಕೊಂಡ ರಾಜ್ಯದ ಮೊದಲ ವಿದ್ಯಾಸಂಸ್ಥೆ**

ಇಂಡಿಯನ್ ನೇವಿಯೊಂದಿಗೆ ಸರ್ಟಿಫಿಕೇಶನ್ ಪ್ರೋಗ್ರಾಂ ಆ್ಯಂಡ್ ಪ್ರಾಡಕ್ಟ್ ಡೆವಲಪ್‌ಮೆಂಟ್‌ಗೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ನೌಕಾಪಡೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯದ ಮೊದಲ ವಿದ್ಯಾಸಂಸ್ಥೆ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯ ಆಗಿದೆ. ಇಂಡಿಯನ್ ನೇವಿ ಜತೆಗೆ ವಿದ್ಯಾರ್ಥಿಗಳು ಪಾಲ್ಗೊಳ್ಳುವಿಕೆ ಸಂಬಂಧ ಎಂಒಯು ಮಾಡಿಕೊಳ್ಳಲಾಗಿದೆ. ಇದರ ಪ್ರಕಾರ ನೌಕಾಪಡೆಯ ಪ್ರಾಜೆಕ್ಟ್‌ಗಳಿಗೆ ತಾಂತ್ರಿಕ ತಜ್ಞರನ್ನು ಆರ್.ವಿ. ಕಾಲೇಜ್ ಆಫ್ ಇಂಜಿನಿಯರಿಂಗ್ ಒದಗಿಸುತ್ತದೆ. ಇಂಡಿಯನ್ ನೇವಿ ಮತ್ತು ಆರ್.ವಿ. ಇಂಜಿನಿಯರಿಂಗ್ ಕಾಲೇಜ್ ಪರಸ್ಪರ ಒಪ್ಪಿಗೆ ಮೇರೆಗೆ ಕಾರ್ಯ ನಿರ್ವಹಿಸಲಿದೆ ಎಂದು ಎನ್‌ಸಿಸಿ ಅಧಿಕಾರಿ ಕ್ಯಾಪ್ಟನ್ ಡಾ. ಮಹೇಂದ್ರ ಕುಮಾರ್ ತಿಳಿಸಿದ್ದಾರೆ.

ನೌಕಾಪಡೆಯ ಮುಖ್ಯಸ್ಥ ಹರಿಕುಮಾರ್, ಉಪ ಮುಖ್ಯಸ್ಥ ಜಿ.ಎನ್. ಫೋರ್ಮೇಡ್, ಆರ್‌ಎಸ್‌ಎಸ್‌ಟಿ ಗೌರವ ಕಾರ್ಯ ದರ್ಶಿ ಡಾ. ಎ.ವಿ.ಎಸ್. ಮೂರ್ತಿ, ಪ್ರಾಂಶುಪಾಲರಾದ ಡಾ. ಕೆ.ಎನ್. ಸುಬ್ರಮಣ್ಯ ಮತ್ತಿತರರು ಉಪಸ್ಥಿತರಿದ್ದರು.

Bengaluru Edition
Oct 23, 2022 Page No. 6
Powered by : eReleGo.com